ಕನ್ನಡಪ್ರಭ 06/09/2019

# ಎಂಪಿಎಂ ಕಾಲೇಜಿನಲ್ಲಿ ಆಂಗ್ಲಭಾಷಾ ಪ್ರಯೋಗಾಲಯ ಉದ್ಘಾಟನೆ

## ರೂಸಾ ಅನುದಾನದ ಯೋಜನೆ | ಗ್ರಾಮೀಣ ವಿದ್ಯಾರ್ಥಿಗಳಿಗೆ ಆಂಗ್ಲ ಭಾಷೆ ಕಲಿಕೆ ಉದ್ದೇಶ

• **ಕನ್ನಡಪ್ರಭ ವಾರ್ತೆ** ಕಾರ್ಕಳ

ರಾಷ್ಟ್ರೀಯ ಉಚ್ಚತರ ಶಿಕ್ಷಾ ಅಭಿಯಾನ ಯೋಜನೆಯಡಿ ಮಂಜೂರಾದ ಅನುದಾನದಲ್ಲಿ ನಿರ್ಮಾಣಗೊಂಡ ಆಂಗ್ಲಭಾಷಾ ಪ್ರಯೋಗಾಲಯದ ಉದ್ಘಾಟನೆಯು ಮಂಜುನಾಥ ಪೈ ಸ್ಮಾರಕ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಬುಧವಾರ ನಡೆಯಿತು.

ಸುಮಾರು 10 ಲಕ್ಷ ರು. ವೆಚ್ಚದಲ್ಲಿ ರೂಸಾ ಅನುದಾನದಲ್ಲಿ ನಿರ್ಮಾಣಗೊಂಡ ಈ ಪ್ರಯೋಗಾಲಯವು ಕಾಲೇಜಿಗೆ ಆಗಮಿಸುವ ಬಹುಪಾಲು ಗ್ರಾಮೀಣ ವಿದ್ಯಾರ್ಥಿಗಳಿಗೆ ಸರಿಯಾದ ಕ್ರಮದಲ್ಲಿ ಆಂಗ್ಲ ಭಾಷೆ ಕಲಿಸುವ ಉದ್ದೇಶ ಹೊಂದಿದೆ.

ಕೋಟೇಶ್ವರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ. ರಾಜೇಂದ್ರ ನಾಯಕ್ ಪ್ರಯೋಗಾಲಯ ಉದ್ಘಾಟಿಸಿ, ನಾವು ಭಾಷೆಯ ಗುಲಾಮರಾಗುವುದಲ್ಲ. ಬದಲಿಗೆ ಭಾಷೆಯನ್ನು ಚೆನ್ನಾಗಿ ದುಡಿಸಿಕೊಂಡು ಸಂವಹನವನ್ನು ಪರಿಣಾಮಕಾರಿಯಾಗಿಸುವುದನ್ನು ಕಲಿಯಬೇಕು. ಭಾಷೆಯ ಅಂತರಾಳ ಅರ್ಥ ಮಾಡಿಕೊಳ್ಳಬೇಕು ಎಂದರು.

ವೃತ್ತಿಯ ಆರಂಭದ ದಿನಗಳಲ್ಲಿ ಹಾಗೂ ವಿದ್ಯಾರ್ಥಿದೆಸೆಯಲ್ಲಿ ಇಂಗ್ಲಿಷ್ ಸಂವಹನದ ತೊಡಕಿನಿಂದಾಗಿ ತಾನು ಎದುರಿಸಿದ ಮುಜುಗರವನ್ನು ಮೆಲುಕು ಹಾಕಿದ ಅವರು, ಕಾಲೇಜಿನ ವಿದ್ಯಾರ್ಥಿಗಳು ಭಾಷಾ ಪ್ರಯೋಗಾಲಯದಿಂದ ಪ್ರಯೋಜನ ಪಡೆಯಬೇಕು. ಭಾಷೆಯನ್ನು ಸರಿಯಾಗಿ ಬೆಳೆಸಿಕೊಂಡರೆ ಯಶಸ್ವಿ ವ್ಯಕ್ತಿಗಳಾಗಬಹುದು. ಇಂಗ್ಲಿಷ್ ಜಾಗತಿಕ ಮಟ್ಟದಲ್ಲಿ ಬೆಳೆದ ಭಾಷೆಯಾಗಿದೆ. ಸುಮಾರು 1066ರ ಕಾಲಘಟ್ಟದಲ್ಲಿ 15 ಲಕ್ಷದಷ್ಟು ಜನ ಮಾತ್ರ ಆಂಗ್ಲಭಾಷೆ ಮಾತನಾಡುತ್ತಿದ್ದರು, 1962ರಲ್ಲಿ ಇದು 30 ಕೋಟಿಗೆ ಏರಿಕೆಯಾಗಿತ್ತು. ಇಂಗ್ಲಿಷ್ ಅಷ್ಟರಮಟ್ಟಿಗೆ ಜಾಗತಿಕವಾಗಿ ಹರಡಿದೆ. ನಮ್ಮ ಮಾತೃಭಾಷೆಯನ್ನು ಬಿಡಬಾರದು. ಆದರೆ ಅಷ್ಟಕ್ಕೇ ನಿರ್ಬಂಧಿಸಿಕೊಳ್ಳಬಾರದು ಎಂದರು.

**ಕೀಳರಿಮೆ ಸಲ್ಲದು:** ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲ ಶ್ರೀವರ್ಮ ಅಜ್ರಿ, ನಾವು ಪ್ರಪಂಚದೊಂದಿಗೆ ವ್ಯವಹರಿಸಲು ಸಾಧ್ಯವಾಗಿರುವುದು ಇಂಗ್ಲಿಷ್ ನಿಂದಾಗಿ. ಇಂಗ್ಲಿಷ್ ಕಲಿತರೆ ಉದ್ಯೋಗದ ಅವಕಾಶಗಳು ಹೆಚ್ಚು. ಆದರೆ ಇಂಗ್ಲಿಷ್ ಬಾರದವರು ಕೀಳರಿಮೆ ಬೆಳೆಸಿಕೊಳ್ಳುವುದು ಬೇಡ ಎಂದರು.

ಆಂಗ್ಲಭಾಷಾ ವಿಭಾಗದ ಮುಖ್ಯಸ್ಥ ಯೋಗೀಶ್ ಡಿ. ಎಚ್. ಮಾತನಾಡಿ, ಪ್ರಾಯೋಗಿಕ ಕಲಿಕೆ ಮೂಲಕ ವಿದ್ಯಾರ್ಥಿಗಳಿಗೆ ಲ್ಯಾಬ್‌ನಲ್ಲಿ ಇಂಗ್ಲಿಷ್ ಕಲಿಸಲಾಗುತ್ತದೆ. ಕೇಳುವುದು, ಮಾತನಾಡುವುದು, ಓದುವುದು ಹಾಗೂ ಬರೆಯುವುದು ಈ ನಾಲ್ಕು ವಿಧಾನಗಳ ಮೂಲಕ ಹೊಸ ಭಾಷೆ ಕಲಿಯಬಹುದು ಎಂದರು.

ವಾಣಿಜ್ಯ ವಿಭಾಗದ ಮುಖ್ಯಸ್ಥೆ ಜ್ಯೋತಿ ಎಲ್. ಜನ್ನೆ ಇದ್ದರು. ಶರಣ್ಯ ಪ್ರಾರ್ಥಿಸಿದರು. ಸಹಾಯಕ ಪ್ರಾಧ್ಯಾಪಕಿ ಸಂಧ್ಯಾ ಭಂಡಾರಿ ಸ್ವಾಗತಿಸಿದರು. ಸಹಾಯಕ ಪ್ರಾಧ್ಯಾಪಕಿ ದಿವ್ಯಾ ಪ್ರಭು ವಂದಿಸಿದರು.

KP




ಕಾರ್ಕಳದ ಮಂಜುನಾಥ ಪೈ ಸ್ಮಾರಕ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಂಗ್ಲಭಾಷಾ ಪ್ರಯೋಗಾಲಯದ ಉದ್ಘಾಟನೆ ಕಾರ್ಯಕ್ರಮ ಬುಧವಾರ ನಡೆಯಿತು.